ಕರ್ನಾಟಕ ಸರ್ಕಾರ
ಅರಣ್ಯ ಇಲಾಖೆ

**Government of Karnataka**
**Forest Department**

**ಮುಖ್ಯ ಅರಣ್ಯ ಸಂರಕ್ಷಣಾಧಿಕಾರಿಗಳ ಕಚೇರಿ, ಕೊಡಗು ವೃತ್ತ, ಮಡಿಕೇರಿ-571201, ಕೊಡಗು ಜಿಲ್ಲೆ**
**OFFICE OF THE CHIEF CONSERVATOR OF FORESTS, KODAGU CIRCLE, MADIKERI-571201, KODAGU DISTRICT**
**Email:ccfkodagu@gmail.com** **ದೂರವಾಣಿ /Phone:08272-225708**

---

ಸಂಖ್ಯೆ : ಭೂಮಿ/(ಎಸ್‌ಎಲ್)/ಸಿಆರ್-12/(2003-04)/2013-14 ದಿನಾಂಕ : 01.04.2019

**ಇವರಿಗೆ,**

ಉಪ ಅರಣ್ಯ ಸಂರಕ್ಷಣಾಧಿಕಾರಿ
ಮಡಿಕೇರಿ ಪ್ರಾದೇಶಿಕ ವಿಭಾಗ

ವಿಷಯ: Release of 1.00 ha of forest land in Sy.No. 236/10f karnageri village of Madikeri District for Construction of KEB Sub Station in favour of the Executive Engineer O & M Division KEB Madikeri – reg

ಉಲ್ಲೇಖ:1) ಅಪರ ಪ್ರಧಾನ ಮುಖ್ಯ ಅರಣ್ಯ ಸಂರಕ್ಷಣಾಧಿಕಾರಿ (ಅರಣ್ಯ ಸಂರಕ್ಷಣೆ) ಬೆಂಗಳೂರು ಇವರ ಪತ್ರ ಸಂಖ್ಯೆ ಎ5/ಜಿಎಫ್‌ಎಲ್/ಸಿಆರ್-23/2014-15 ದಿನಾಂಕ 14.11.2018.

2) ಈ ಕಛೇರಿ ಪತ್ರ ಸಮ ಸಂಖ್ಯೆ ದಿನಾಂಕ 19.01.2019 ಮತ್ತು 28.02.2019.

3) ನಿಮ್ಮ ಕಛೇರಿ ಪತ್ರ ಸಂಖ್ಯೆ ಎ3/ಎಫ್‌ಸಿಎ/ಕರ್ಣಂಗೇರಿ/ಸಿಆರ್/53/ 98-99 ದಿನಾಂಕ 27.03.2019.

*****

ವಿಷಯಕ್ಕೆ ಸಂಬಂಧಿಸಿದಂತೆ ಉಲ್ಲೇಖ (1)ರ ಪತ್ರದಲ್ಲಿ ತಿಳಿಸಿರುವಂತೆ ಕರ್ಣಂಗೇರಿ ಗ್ರಾಮದ ಸರ್ವೆ ನಂಬರ್ 236/1 ರಲ್ಲಿ 1.00 ಹೆಕ್ಟೇರ್ ಅರಣ್ಯ ಪ್ರದೇಶವನ್ನು ಕರ್ನಾಟಕ ವಿದ್ಯುಚ್ಛಕ್ತಿ ಮಂಡಳಿ ಇವರಿಗೆ 66.11 ಕೆ.ವಿ.ಸಬ್‌ಸ್ಟೇಶನ್ ಸ್ಥಾಪಿಸಲು ಸರ್ಕಾರದ ಆದೇಶದಂತೆ 10 ವರ್ಷದ ಅವಧಿಗೆ ಗುತ್ತಿಗೆ ನೀಡಿದ್ದು ಗುತ್ತಿಗೆ ಅವಧಿ ಮುಗಿದಿರುವ ಕಾರಣ ಸದರಿ ಗುತ್ತಿಗೆ ಅವಧಿಯನ್ನು ನವೀಕರಿಸುವ ಸಲುವಾಗಿ ಅಂತರ್ಜಾಲ ಮೂಲಕ ದಾಖಲಿಸಿ ಮೇಲಾಧಿಕಾರಿಗಳ Loginಗೆ ಕಳುಹಿಸಲಾಗಿ Part-IIಗೆ ಸಂಬಂಧಿಸಿದಂತೆ ನ್ಯೂನತೆಗಳಿರುವುದರಿಂದ ಸರಿಪಡಿಸುವ ಸಲುವಾಗಿ ಉಲ್ಲೇಖ (2) ರಂತೆ ನಿಮಗೆ ಹಿಂತಿರುಗಿಸಿ ಕೂಡಲೇ ನ್ಯೂನತೆಗಳನ್ನು ಸರಿಪಡಿಸಿ ಅಂತರ್ಜಾಲದ ಮುಖಾಂತರ ದಾಖಲಿಸಿ ಹಾರ್ಡ್ ಕಾಪಿಯನ್ನು ಸಲ್ಲಿಸಲು ತಿಳಿಸಲಾಗಿ ಉಲ್ಲೇಖ (3)ರಂತೆ ನೀವು ನವೀಕರಣ ಪ್ರಸ್ತಾವನೆಯನ್ನು (ನ್ಯೂನತೆ) ಸಲ್ಲಿಸಿರುತ್ತೀರಿ.

ಆದರೆ ನೀವು ಸಲ್ಲಿಸಿರುವ ನವೀಕರಣದ ಪ್ರಸ್ತಾವನೆಯನ್ನು (ನ್ಯೂನತೆಗಳು) ಪರಿಶೀಲಿಸಲಾಗಿ ಉಲ್ಲೇಖ (1)ರ ಪತ್ರದಂತೆ ಆಕ್ಷೇಪಣೆ ಸಂಖ್ಯೆ (3) ಮತ್ತು (4)ರ ಅಂಶಗಳಿಗೆ ನೀಡಲಾದ ಮಾಹಿತಿಯು ಅಪೂರ್ಣವಾಗಿದ್ದು ಮೇಲಾಧಿಕಾರಿಗಳ ಕಛೇರಿಯಿಂದ ಗುರುತಿಸಲ್ಪಟ್ಟ ನ್ಯೂನತೆಗಳನ್ನು ಸರಿಯಾಗಿ ಪರಿಶೀಲಿಸದೆ ಹಾಗೂ ಅಧೀನ ಕಛೇರಿಗಳಿಂದ ಬಂದ ಮಾಹಿತಿಯನ್ನು ಪರಿಶೀಲಿಸದೆ ಯಥಾವತ್ತಾಗಿ ಸಲ್ಲಿಸಿ ಸಮಯ ವಿಳಂಬಿಸುತ್ತಿರುವುದು ಸರಿಯಲ್ಲ. ಈಗಾಗಲೇ ಸಾಕಷ್ಟು ಸಮಯ ವಿಳಂಬವಾಗಿದ್ದು ಸದರಿ ಸಂಸ್ಥೆಯವರು ಆಗಿಂದಾಗ್ಗೆ ಈ ಕಛೇರಿಗೆ ಭೇಟಿ ನೀಡಿ ಅಸಮಾಧಾನವನ್ನು ವ್ಯಕ್ತಪಡಿಸುತ್ತಿರುವುದರಿಂದ ವಿಷಯಕ್ಕೆ ಸಂಬಂಧಿಸಿದವರು ನ್ಯೂನತೆಗೆ ತಕ್ಕಂತೆ ಮಾಹಿತಿ ನೀಡಬೇಕಾಗಿರುವುದನ್ನು ಗಮನಿಸಿಕೊಂಡು ಕರ್ತವ್ಯ ನಿರ್ವಹಿಸಬೇಕಾಗಿರುತ್ತದೆ.

ಆದುದರಿಂದ ಈ ಕೆಳಕಾಣಿಸಿದ ಮಾಹಿತಿಯನ್ನು ಪೂರ್ಣಗೊಳಿಸಿ ನವೀಕರಣ ಪ್ರಸ್ತಾವನೆಯನ್ನು **5 ( ಐದು ) ಸೆಟ್‌ಗಳಲ್ಲಿ ಮರು ಸಲ್ಲಿಸಲು** ತಿಳಿಸಿ ಅಂತರ್ಜಾಲದ ಮೂಲಕ ದಾಖಲಿಸಿರುವುದನ್ನು ಹಿಂತಿರುಗಿಸಿದೆ.

1. ನಕ್ಷೆಯಲ್ಲಿ ಉಪ ಅರಣ್ಯ ಸಂರಕ್ಷಣಾಧಿಕಾರಿಯವರು ಸಹಿ ಮಾಡಿರುವುದಿಲ್ಲ.
2. ನಕ್ಷೆಯಲ್ಲಿ ಟೋಪಾಶೀಟ್ ಸಂಖ್ಯೆಯನ್ನು ದಾಖಲಿಸಿರುವುದಿಲ್ಲ.
3. 66/11 ಕೆ.ವಿ. ಉಪ ಕೇಂದ್ರ ನಿರ್ಮಾಣಕ್ಕೆ ರಾಜ್ಯ ಸರ್ಕಾರದಿಂದ ಅನುಮೋದನೆ ನೀಡುವ ಸಂದರ್ಭದಲ್ಲಿ ವಿಧಿಸಿರುವ ಷರತ್ತುಗಳಿಗೆ ಅನುಪಾಲನಾ ವರದಿಯನ್ನು ಸಲ್ಲಿಸುವುದು.

**ಇದು ಅತ್ಯಂತ ಪ್ರಾಮುಖ್ಯತೆ**

ಮುಖ್ಯ ಅರಣ್ಯ ಸಂರಕ್ಷಣಾಧಿಕಾರಿ
ಕೊಡಗು ವೃತ್ತ, ಮಡಿಕೇರಿ

ರವಾನಿಸಲಾಗಿದೆ
3 APR 2019
ಮುಖ್ಯ ಅರಣ್ಯ
ಸಂರಕ್ಷಣಾಧಿಕಾರಿಯವರ ಕಛೇರಿ
ಕೊಡಗು ವೃತ್ತ, ಮಡಿಕೇರಿ